**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 557/2024**

**ಚಾ.ಸಾಃ 5, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ರಾಘವೇಂದ್ರ ಶೇಟ್ |
| ತಂದೆಯ ಹೆಸರು | ನಾಗರಾಜ ಶೇಟ್ |
| ವಯಸ್ಸು | 47 ವರ್ಷಗಳು |
| ಉದ್ಯೋಗ | ಚಿನ್ನ ಬೆಳ್ಳಿ ಕೆಲಸ |
| ವಾಸ್ತವ್ಯ | ಹೊಸಪಟ್ಟಣ, ತಾಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 27-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 10-05-2024 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು 29-04-2024 ರಂದು ರಾತ್ರಿ ಮಂಕಿಯ ಬಂಗಾರದ ಅಂಗಡಿಯಲ್ಲಿ ಕಳ್ಳತನ ಮಾಡಿದ್ದ ಆರೋಪಿತರು ಸಿಕ್ಕಿದ್ದು ಇದರ ಬಗ್ಗೆ ವಸ್ತುಗಳನ್ನು ಅಮಾನತ್ತುಪಡಿಸಿಕೊಳ್ಳಲು ಪೋಲೀಸರು ಕರೆದಿದ್ದರು. ಅದರಂತೆ ನಾನು ಠಾಣೆಗೆ ಹೋದಾಗ ಅಲ್ಲಿ 2 ಮತ್ತು 6 ನೇ ಆರೋಪಿತರು ಇದ್ದರು. ಅವರು ತಾವು ಕಳ್ಳತನ ಮಾಡಿದ್ದನ್ನು ಒಪ್ಪಿಕೊಂಡಿದ್ದು ಅಂಗಡಿಗೆ ಹಾಕಿದ್ದ ಬೀಗ ಮತ್ತು ರಾಡನ್ನು ತೋರಿಸುತ್ತೇವೆ ಅಂತ ಹೇಳಿದ್ದರು. ನನ್ನ ಜೊತೆಯಲ್ಲಿ ಚಾಸಾ-4 ರವರು ಇದ್ದರು. ಅದರಂತೆ ಪೋಲೀಸರು ನಮ್ಮನ್ನು ಆರೋಪಿತರೊಡನೆ ಕರೆದುಕೊಂಡು ಹೋಗಿದ್ದು ಅದರಂತೆ ಆರೋಪಿತರು ನಮ್ಮನ್ನು ಮೊದಲು ಮಂಕಿಯ ರೈಲ್ವೆ ಸ್ಟೇಶನ್ ಹತ್ತಿರ ಕರೆದುಕೊಂಡು ಹೋಗಿದ್ದು ಅಲ್ಲಿಂದ ಒಂದು ಪಕ್ಕದ ರಸ್ತೆಯಲ್ಲಿ ಒಂದು ಜಾಗಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ 3 ಬೀಗಗಳು ಮತ್ತು ಒಂದು ರಾಡ್ ಇದ್ದು ಅದನ್ನು ತೋರಿಸಿದರು. ಪೋಲೀಸರು ಅವುಗಳನ್ನು ಫೋಟೋ ತೆಗೆದು ಅಮಾನತ್ತುಪಡಿಸಿಕೊಂಡು ಒಂದು ಪಂಚನಾಮೆ ಬರೆದು ಒಂದು ಫೋಟೋ ತೆಗೆದು ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-19 ಎಂದು, ಸಾಕ್ಷಿ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಪೋಲೀಸ್ ಠಾಣೆಯಲ್ಲಿ ಮತ್ತು ಸದರಿ ಸ್ಥಳದಲ್ಲಿ ತೆಗೆದ ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**